ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ,
ನಂ.4 ಕಟ್ಟಡಗಳ ಉಪವಿಭಾಗ
ಲೋಕೋಪಯೋಗಿ ಇಲಾಖೆ, ಬೆಂಗಳೂರು-560 001.

ದೂರವಾಣಿ ಸಂಖ್ಯೆ: 080-22267585
ಇ-ಮೇಲ್: aeeno4bldg@gmail.com

# ಲೋಕೋಪಯೋಗಿ ಇಲಾಖೆ

ಸಂ: ಸಕಾಅ/ಕಉವಿ-4/ಸ.ಇಂ/ಕ.ದೃಢೀಕರಣ ಪತ್ರ/2022-23/ 1413 ದಿನಾಂಕ: 24-03-2023

ರವರಿಗೆ,

Principal,
Mount Carmel Central School,
Teresian Carmel Educational Society,
Affiliatd to CBSE,
New Delhi, Affiliation No. 831084,
No. 58, Palace Road, Bangalore - 560052

ಮಾನ್ಯರೆ,

<u>ವಿಷಯ:</u> ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

<u>ಉಲ್ಲೇಖ:</u> 1. ತಮ್ಮ ವಿದ್ಯಾ ಸಂಸ್ಥೆಯ ಕಛೇರಿ ಪತ್ರ ದಿನಾಂಕ 24.03.2023
2. ಕರ್ನಾಟಕ ಸರ್ಕಾರ ಅಪರ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ರವರ ಸುತ್ತೋಲೆ ಪತ್ರ ಸಂಖ್ಯೆ : ಲೋಇ 59 ಬಿಇಡಿ 2019 ಬೆಂಗಳೂರು ದಿ: 06.05.2022

- - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **Teresian Carmel Educational Society** ವತಿಯಿಂದ ನಡೆಸುತ್ತಿರುವ **Mount Carmel Central School, New Delhi, Affiliation NO. 831084, No. 58, Palace Road, Bangalore - 52** ಇಲ್ಲಿನ ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರ ನೀಡಲು ಉಲ್ಲೇಖಿತ (1) ರ ಪತ್ರದಲ್ಲಿ ಕೋರಿರುತ್ತೀರಿ.

ಅದರಂತೆ, ದಿನಾಂಕ: 24.03.2023 ರಂದು ಸಂಬಂಧಪಟ್ಟ ಸಹಾಯಕ ಇಂಜಿನಿಯರ್ ರವರೊಂದಿಗೆ ಸದರಿ ಶಾಲೆಯ ಪ್ರಾಂಶುಪಾಲರಾದ Sr. Rosy V.J ಮತ್ತು ಶಾಲೆಯ ನಿರ್ವಾಹಕರಾದ ಶ್ರೀಮತಿ. ಭವ್ಯ ರವರೊಂದಿಗೆ ಸದರಿ ಶಾಲಾ ಕಟ್ಟಡದ ಪರಿವೀಕ್ಷಣೆಯನ್ನು ಕೈಗೊಳ್ಳಲಾಯಿತು.

Mount Carmel Central School, New Delhi, Affiliation NO. 831084, No. 58, Palace Road, Bangalore - 52 ಇಲ್ಲಿನ ಶಾಲಾ ಕಟ್ಟಡವನ್ನು 6767.20 ಚ.ಮೀ ಜಾಗದಲ್ಲಿ 2021ರಲ್ಲಿ ನಿರ್ಮಿಸಲಾಗಿದ್ದು, ಸದರಿ ಕಟ್ಟಡವು RCC Framed Structure ಕಟ್ಟಡವಾಗಿದ್ದು, ತಳ+ನೆಲ ಮಹಡಿಯೊಂದಿಗೆ ಐದು ಅಂತಸ್ತಿನ ಕಟ್ಟಡ (ನೆಲ, ಮೊದಲನೇ, ಎರಡನೇ, ಮೂರನೇ, ನಾಲ್ಕನೇ ಮತ್ತು ಐದನೇ ಮಹಡಿ) ವಾಗಿರುತ್ತದೆ. ಕಟ್ಟಡದಲ್ಲಿ ಗೋಡೆಗಳನ್ನು ಇಟ್ಟಿಗೆಯಿಂದ ನಿರ್ಮಿಸಿದ್ದು, Granite, Tiles Flooring, ಯುಪಿವಿಸಿ ಕಿಟಕಿಗಳು ಮತ್ತು ಮರದ ಬಾಗಿಲುಗಳನ್ನು ಅಳವಡಿಸಲಾಗಿರುತ್ತದೆ.

ನಂತರ ಹಾಜರಿದ್ದ ಶಾಲಾ ಸದಸ್ಯರೊಂದಿಗೆ ಕಟ್ಟಡದ ಒಳ ಹಾಗೂ ಹೊರಭಾಗವನ್ನು ಪರಿವೀಕ್ಷಣೆ ಮಾಡಲಾಗಿ, ಸದರಿ ಕಟ್ಟಡವು ತಳ + ನೆಲ ಮಹಡಿಯೊಂದಿಗೆ ಐದು ಅಂತಸ್ತು ಹೊಂದಿದ್ದು, ಒಟ್ಟು 35 ಶಾಲಾ ಕೊಠಡಿಗಳೊಂದಿಗೆ 07 ಇತರೆ ಕೊಠಡಿಗಳಿರುವುದು ಕಂಡುಬಂದಿರುತ್ತದೆ.

ಉಲ್ಲೇಖ (2) ರ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಎರಡು ರೀತಿಯ Non Destructive test ಗಳನ್ನು ಕೈಗೊಳ್ಳಲಾಗಿರುತ್ತದೆ.

ಮುಂದುವರೆದು, N.D.T. Test ಗಳನ್ನು Nishicon Infrastructures, Vijayanagara, Banglore ರವರಿಂದ ಕೈಗೊಂಡಿದ್ದು, ಸದರಿ ಪರೀಕ್ಷಾ ವರದಿಯನ್ನು ಯು.ವಿ.ಸಿ.ಇ. ಬೆಂಗಳೂರು ವಿಶ್ವವಿದ್ಯಾಲಯ, ಸಿವಿಲ್ ಇಂಜನಿಯರ್ ವಿಭಾಗದ Professor Dr. N. Jayaramappa, B.E (Civil), ME (Str), Ph.D. ರವರು ಪರಿಶೀಲಿಸಿ, ದೃಢೀಕರಿಸಿರುತ್ತಾರೆ. ಅದರಂತೆ, "National Building Code of India" ರ ಮಾನದಂಡದಂತೆ ಅನುಗುಣವಾಗಿರುತ್ತದೆ ಎಂದು ವರದಿಸಿರುತ್ತಾರೆ.

**ತಾವುಗಳು ಈ ಕೆಳಕಂಡ ಅಗತ್ಯ ದಾಖಲೆಗಳನ್ನು ಸಲ್ಲಿಸಿರುತ್ತೀರಿ.**

1. As built Drawing
2. Structural Drawings
3. Soil Test Report
4. Ultrasonic Pulse Velocity Test Report
5. Rebound Hammer Test result.

ಉಲ್ಲೇಖ (2)ರ ಸರ್ಕಾರದ ಸುತ್ತೋಲೆಯಲ್ಲಿನ ಕ್ರಮ ಸಂಖ್ಯೆ (2)ರಲ್ಲಿ ಸೂಚಿಸಿರುವಂತೆ ನಗರ ಪ್ರದೇಶದಲ್ಲಿ ಒಂದು ಶಾಲೆಗೆ – ರೂ. 5,000.00 ಗಳನ್ನು ಶುಲ್ಕವಾಗಿ ಪಾವತಿಸಲು ಸೂಚಿಸಿರುವ ಹಿನ್ನಲೆಯಲ್ಲಿ ಸದರಿ ಶಾಲಾ ಸಂಸ್ಥೆಯವರು ಚಲನ್ ಉಲ್ಲೇಖ ಸಂಖ್ಯೆ: CR0323005900729363 dtd. 24.03.2023 ರಲ್ಲಿ ರೂ. 5,000.00 (ಐದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಲಾಗಿರುತ್ತದೆ.

ಸದರಿ ಶಾಲಾ ಕಟ್ಟಡಗಳ ಎಲ್ಲಾ ಮಹಡಿಗಳು ಹಾಗೂ ಪ್ರಮುಖ ಭಾಗಗಳನ್ನು ಪರಿಶೀಲಿಸಲಾಯಿತು. ಈ ಸಮಯದಲ್ಲಿ ಮೇಲ್ನೋಟಕ್ಕೆ ಕಟ್ಟಡದಲ್ಲಿ ಯಾವುದೇ ಬಿರುಕುಗಳಾಗಲೀ ಮತ್ತು ಗೋಡೆ/ ಮೇಲ್ಚಾವಣಿಯಗಳಾಗಲೀ ತೇವಾಂಶ ಕಂಡು ಬಂದಿರುವುದಿಲ್ಲ ಈ ಹಿನ್ನಲೆಯಲ್ಲಿ ಸದರಿ ಕಟ್ಟಡವು ಸುರಕ್ಷಿತವಾಗಿದೆ ಎಂದು ಅಭಿಪ್ರಾಯಿಸಲಾಯಿತು. ಸದರಿ ಕಟ್ಟಡಗಳ ನಿರ್ವಹಣೆ ಮಾಡುವ ಜವಬ್ದಾರಿಯು ಸದರಿ ವಿದ್ಯಾಸಂಸ್ಥೆಯವರದಾಗಿರುತ್ತದೆ ಹಾಗೂ ಈ ಪ್ರಮಾಣ ಪತ್ರವನ್ನು ಯಾವುದೇ ಸಮಯದಲ್ಲಿ ಹಿಂಪಡೆಯುವ ಷರತ್ತಿಗೊಳಪಟ್ಟಿರುತ್ತದೆ.

ಮುಂದುವರೆದು ಕಟ್ಟಡದ ಮಂಜೂರಾದ ನಕ್ಷೆಗೆ ವಿರುದ್ಧವಾಗಿ ಯಾವುದಾದರೂ ಬದಲಾವಣೆ ಅಥವಾ ನಿರ್ಮಾಣ ಮಾಡಿದಲ್ಲಿ ಸದರಿ ಪ್ರಮಾಣ ಪತ್ರವು ತನ್ನಿಂತಾನೆ ರದ್ದುಗೊಳ್ಳುವುದೆಂದು ತಿಳಿಸುತ್ತಾ, ಸದರಿ ಪ್ರಮಾಣ ಪತ್ರವನ್ನು **Teresian Carmel Educational Society** ವಿದ್ಯಾಸಂಸ್ಥೆಯ ವತಿಯಿಂದ ನಡೆಸುತ್ತಿರುವ **Mount Carmel Central School, New Delhi, Affiliation NO. 831084, No. 58, Palace Road, Bangalore – 52** ಇಲ್ಲಿನ ಶಾಲಾ ಕಟ್ಟಡಕ್ಕೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಬಳಸಬಹುದಾಗಿರುತ್ತದೆ. ಅದರಂತೆ, ಸದರಿ ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು,
ನಂ.4 ಕಟ್ಟಡಗಳ ಉಪವಿಭಾಗ,
ಬೆಂಗಳೂರು.